## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 628

ಮಾನ್ಯ ಸದಸ್ಯರ ಹೆಸರು : ಶ್ರೀ ಹೆಚ್. ಎಂ. ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 04.03.2021

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎನ್.ಪಿ.ಎಸ್ ನೌಕರರ ಹೊಸ ಪಿಂಚಣಿ ಯೋಜನೆಯ ಬದಲು ಹಳೆಯ ಯೋಜನೆಯನ್ನೇ ಮುಂದುವರೆಸಲು ಸರ್ಕಾರದ ಮುಂದಿರುವ ಸಮಸ್ಯೆಗಳೇನು; ಎನ್.ಪಿ.ಎಸ್ ನೌಕರರು ಮರಣ ಹೊಂದಿದರೆ ಅವರ ಕುಟುಂಬದವರಿಗೆ ಕೆಲಸ ನೀಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; (ಮಾಹಿತಿ ನೀಡುವುದು) | ಹಳೆಯ ಪಿಂಚಣಿ ಯೋಜನೆಯನ್ನು ಮುಂದುವರೆಸಲು ಆರ್ಥಿಕ ಹೊರೆಯನ್ನು ನಿಭಾಯಿಸಲು ಸಾಕಷ್ಟು ನಿಧಿಯ ಆಧಾರ ಇಲ್ಲದಿರುವುದರಿಂದ ಹಾಗೂ ರಿಸರ್ವ್ ಬ್ಯಾಂಕ್‌ರವರು ರಚಿಸಿದ ಸಮಿತಿಯ ವರದಿಯ ಶಿಫಾರಸ್ಸಿನ ಆಧಾರದ ಮೇಲೆ ಕೇಂದ್ರ ಸರ್ಕಾರವು ನೂತನ ಪಿಂಚಣಿ ಯೋಜನೆಯನ್ನು ದಿನಾಂಕ: 01.01.2004 ರಿಂದ ಜಾರಿಗೊಳಿಸಿರುತ್ತದೆ. ಅದರಂತೆಯೇ ಇತರೆ ರಾಜ್ಯಗಳು ಈ ಯೋಜನೆಯನ್ನು ಅಳವಡಿಸಿಕೊಂಡ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ಕೂಡ ಸರ್ಕಾರದ ಆದೇಶ ಸಂಖ್ಯೆ: ಆಇ (ಎಸ್.ಪಿ.ಎಲ್.) 04 ಪಿಇಟಿ 2005, ದಿನಾಂಕ: 31.03.2006ರನ್ವಯ ದಿನಾಂಕ: 01.04.2006ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರುವ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದೆ.<br><br>ಎನ್.ಪಿ.ಎಸ್. ನೌಕರರು ಸರ್ಕಾರಿ ನೌಕರರಾಗಿರುವುದರಿಂದ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 ರನ್ವಯ ಸೇವೆಯಲ್ಲಿರುವಾಗಲೇ ಮೃತಪಟ್ಟಲ್ಲಿ ಆತನ ಅವಲಂಬಿತರಲ್ಲಿ ಒಬ್ಬರಿಗೆ ಅರ್ಹತೆಯ ಆಧಾರದ ಮೇಲೆ ಅನುಕಂಪದ ಆಧಾರದ ನೇಮಕಾತಿಯನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ. |
| ಆ) | ಎನ್.ಪಿ.ಎಸ್ ನೌಕರರ ವೇತನದಲ್ಲಿ ಶೇ 10ರಷ್ಟನ್ನು ಕಡಿತಗೊಳಿಸಲಾಗಿದ್ದು, ಇದನ್ನು ಯಾವ ಖಾತೆಗೆ ಜಮಾ ಮಾಡಲಾಗಿದೆ: (ವಿವರ ನೀಡುವುದು) | ಎನ್.ಪಿ.ಎಸ್ ನೌಕರರು ಸೇವೆಗೆ ಸೇರಿದ ನಂತರ ಕೆ.ಜಿ.ಐ.ಡಿ ಸಂಖ್ಯೆ ಪಡೆದು ಮಾನವ ಸಂಪನ್ಮೂಲ ನಿರ್ವಹಣೆ ವ್ಯವಸ್ಥೆಯಲ್ಲಿ ಸೇವಾ ಪುಸ್ತಕವನ್ನು ಸೃಜಿಸಿ, CSRF-1.2 (Common Subscriber Registration Form) Online ಮೂಲಕ ಸಲ್ಲಿಸಿ, Central Regulatory Authority ರವರಿಂದ 12ಅಂಕಿಗಳ ಪ್ರಾನ್ ಸಂಖ್ಯೆ ಪಡೆಯಲಾಗುತ್ತದೆ. ತದನಂತರ ಮಾನವ ಸಂಪನ್ಮೂಲ ನಿರ್ವಹಣೆ ವ್ಯವಸ್ಥೆಯಲ್ಲಿ ವೇತನ ಬಿಲ್ಲನ್ನು ಸಿದ್ದಪಡಿಸುವಾಗ ನೌಕರರ ಎನ್.ಪಿ.ಎಸ್. ವಂತಿಗೆ (ಮೂಲ ವೇತನ+ ತುಟ್ಟಿಭತ್ಯೆ) ಶೇ. 10ರಷ್ಟು ವೇತನದಿಂದ |

<table>
<tr><td></td><td></td><td>ಕಟಾವಣೆಯಾಗುತ್ತದೆ. ಇದಕ್ಕೆ ಖಜಾನೆಯಿಂದ ಸರ್ಕಾರ ಶೇ.14ರಷ್ಟು ವಂತಿಗೆಯನ್ನು ಸೇರಿಸಿ, Central Regulatory Authority ರವರಲ್ಲಿ ತೆರೆದಿರುವ ಪ್ರಾನ್ ಖಾತೆಗೆ ಜಮಾ ಮಾಡಲಾಗುತ್ತಿದೆ.<br><br>ತದನಂತರ ಸದರಿ ಮೊತ್ತವನ್ನು ಎನ್.ಪಿ.ಎಸ್. ಟ್ರಸ್ಟ್ ನಿಂದ ನೇಮಿಸಿರುವ ಪಿಂಚಣಿ ನಿಧಿ ನಿರ್ವಾಹಕರಲ್ಲಿ (Pension Fund Manager) ಈ ಕೆಳಕಂಡಂತೆ ಹೂಡಿಕೆ ಮಾಡಲಾಗುತ್ತಿದೆ.<br><table>
<tr><td>1</td><td>ಎಸ್.ಬಿ.ಐ</td><td>38.50%</td></tr>
<tr><td>2</td><td>ಎಲ್. ಐ.ಸಿ</td><td>29.50%</td></tr>
<tr><td>3</td><td>ಯು. ಟಿ. ಐ</td><td>32.00%</td></tr>
</table></td></tr>
<tr><td>ಇ)</td><td>ಎನ್.ಪಿ.ಎಸ್ ನೌಕರರಿಗೆ ಜಿ.ಪಿ.ಎಫ್ ಖಾತೆ ತೆರೆಯುವ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು)</td><td>ಕರ್ನಾಟಕ ಸರ್ಕಾರಿ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 2016ರ ನಿಯಮಗಳು ಎನ್.ಪಿ.ಎಸ್. ನೌಕರರಿಗೆ ಅನ್ವಯಿಸುವುದಿಲ್ಲ.</td></tr>
<tr><td>ಈ)</td><td>ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸರ್ಕಾರಿ ಕಛೇರಿಯಲ್ಲಿ ಕೊರತೆಯಿರುವ ಸಿಬ್ಬಂದಿಗಳ ಭರ್ತಿ ಪ್ರಕ್ರಿಯೆ ಪೂರ್ಣವಾಗಿದೆಯೇ? ವಿವರಗಳೊಂದಿಗೆ ಮಾಹಿತಿ ನೀಡುವುದು)</td><td>ಆರ್ಥಿಕ ಮಿತವ್ಯಯ ಆದೇಶವನ್ನು ಗಮನದಲ್ಲಿರಿಸಿ ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.<br><br>ಪ್ರಸ್ತುತ 7,72,435 ಮಂಜೂರಾದ ಹುದ್ದೆಗಳ ಪೈಕಿ 5,18,632 ಹುದ್ದೆಗಳು ಭರ್ತಿಯಾಗಿವೆ.</td></tr>
</table>

ಆಇ 44 ಪಿಇಎನ್ 2021

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

***